# ನೂಪುರ

# ಭ್ರಮರಿ

...ನರ್ತನ ಜಗತ್ತಿಗೊಂದು ಪರಿಭ್ರಮಣ



೨೦೦೭

ಜುಲೈ-ಆಗಸ್ಟ್

ಸಂಪುಟ : ೪



...ಢಕ್ಕೆಯು ಶಿರಕ್ಕೆತ್ತಿ ತಾಳಗಳಿಂ ತಟ್ಟಿ
ತಕ್ಕಿಟ ಧಿಮಿಕಿಟ ತಕಜೊಣುರೆನ್ನಿಸಿ
ಕುಕ್ಕುತೆ ಚರಣವ ಪುಲಕುತೆ ಕಾಯುವ
ಸೊಕ್ಕಿದ ಕುಣಿತವ ಕುಣಿಯೆಲೆ ಎಲೆ ಬಾಲೆ...

ಏನೀ ಮಹಾನಂದವೇ ಓ ಭಾಮಿನೀ
ಏನೀ ಸಂಭ್ರಮದಂದವೇ ಬಲು ಚಂದವೇ...

-ಡಿ.ವಿ.ಜಿ





ನೂಪುರ ಭ್ರಮರಿ, ಸಾನ್ನಿಧ್ಯ ಪ್ರಕಾಶನ, ದೇಚೂರು ರಸ್ತೆ,
ಅಶ್ವತ್ಥಕಟ್ಟೆ ಸಮೀಪ, ಮಡಿಕೇರಿ, ಕೊಡಗು, 571201,
ಫೋನ್ ನಂ 9880592986
ಇ-ಮೈಲ್ ವಿಳಾಸ: noopurabhramari@rediffmail.com

**ಖಾಸಗಿ ಪ್ರಸಾರದ ದ್ವೈಮಾಸಿಕ**

**ಮಂಜೀರ**

**ಸಂಪಾದಕಿ : ಮನೋರಮಾ ಬಿ. ಎನ್**

**ಪ್ರಿಯರೇ,**

ಒಳ ಹುಳುಕುಗಳು, ಶೀತಲ ಸಮರ, ಅನಾರೋಗ್ಯಕರ ಪ್ರತಿಸ್ಪರ್ಧೆ, ಕೆಟ್ಟ ರಾಜಕೀಯ, ಚೌರ್ಯ...ಎಲ್ಲಾ ಕ್ಷೇತ್ರಗಳಲ್ಲೂ ಜನ್ಮಸಿದ್ಧ ಗುಣಗಳೇನೋ! ಈ ಹುಳುಕುಗಳನ್ನು ಮುಚ್ಚಿಹಾಕಲು ಮತ್ತಷ್ಟು ಸುಂದರವೆನಿಸುವ ಸಮಜಾಯಿಷಿಗಳು. ಅಂತಹ ಹುಳುಕುಗಳನ್ನು ಮುಚ್ಚಿಹಾಕಿ ಮುಖವಾಡ ಹಾಕಿಕೊಳ್ಳುವುದರಲ್ಲೇ ಜೀವನದ ಅರ್ಧ ಭಾಗದ ಸಾಧನೆಯೇನೋ! ಹಾಗಾಗಿ 'ಸುಂದರವೆನಿಸಿಕೊಂಡದ್ದರಲ್ಲಿ ಸತ್ಯವಿರುತ್ತದೆ' ಎಂಬ ಕವಿಯ ಮಾತು ಎಷ್ಟೋ ಸಂದರ್ಭ ಅವಾಸ್ತವ ಎಂದು ಕಂಡದ್ದಿದೆ. ಪರಿಣಾಮ ಅಂಟಿದ ಕಳಂಕದ ನಂಟು, ಜೊತೆಗೆ ತನ್ನ ಮೂಲ ಪವಿತ್ರ ಅಸ್ತಿತ್ವಕ್ಕೇ ಕೊಡಲಿ ಪೆಟ್ಟು.

ಪತ್ರಿಕೋದ್ಯಮ, ಮತ್ತು ಪ್ರದರ್ಶನ ಕಲೆಗಳ ಕ್ಷೇತ್ರಗಳೇನೂ ಇವಕ್ಕೆ ಹೊರತಲ್ಲ. ಇವೆರಡೂ ಜನರಿಗೆ ಮಾಹಿತಿ, ಶಿಕ್ಷಣ ಮತ್ತು ರಂಜನೆ ಕೊಡುವ, ಸತ್ಯ-ಸೌಂದರ್ಯದ ಹುಡುಕಾಟದಲ್ಲಿ, ಉಪಾಸನೆಯಲ್ಲಿ ತಲ್ಲೀನವಾಗಿರುವಂತವು ಎಂದು ಬಗೆದು ಗೌರವದಿಂದ ಕಾಣಲಾಗುತ್ತಿದ್ದರೂ, ಸಣ್ಣತನಗಳು ಇವುಗಳನ್ನೇನೂ ಬಿಟ್ಟುಹೋಗಿಲ್ಲ.

ಈ ಬಾರಿ ಕಲಾಕ್ಷೇತ್ರ ಶೈಲಿಯ ಹಿರಿಯ ಗುರು ಬೆಂಗಳೂರಿನ ಕಲಾಕ್ಷಿತಿಯ ಕೃಷ್ಣಮೂರ್ತಿ, ಪಂದನಲ್ಲೂರು ಶೈಲಿಯ ಮಂಗಳೂರಿನ ಹಿರಿಯ ನೃತ್ಯ ಗುರು ನಾಟ್ಯನಿಕೇತನದ ಉಳ್ಳಾಲ ಮೋಹನ್ ಕುಮಾರ್, ಹಾಸನದ ನೃತ್ಯ ಗುರು ಅಂಬಳೆ ರಾಜೇಶ್ವರಿ, ಬೆಂಗಳೂರಿನ ವಿಮರ್ಶಕ ಬಸವರಾಜ್.., ಹೀಗೆ ಹಿರಿಯರಾದಿಯಾಗಿ ಫೋನಾಯಿಸಿ, ಸಂತಸದಿಂದ ಪ್ರತಿಕ್ರಿಯಿಸಿ ಶುಭ ಹಾರೈಸಿದ್ದಾರೆ. ಅದರಲ್ಲೂ ಮೆಚ್ಚುಗೆಯ ಬಹುಪಾಲು ದರ್ಶನ ಭ್ರಮರಿಗೂ, ರಂಗ ಭ್ರಮರಿಗೂ ಸಂದಿದೆ. ಹಲವು ಸ್ನೇಹಿತರು ಸಲಹೆ ಸೂಚನೆಗಳನ್ನು ನೀಡಿದ್ದಾರೆ. ಎಲ್ಲರಿಗೂ ಮನ ತುಂಬಿದ ಕೃತಜ್ಞತೆಗಳು. ತಮ್ಮ ಹರಕೆ-ಹಾರೈಕೆ ನಮ್ಮ ಮೇಲೆ ಸದಾ ಇರಲಿ.

**ಪ್ರೀತಿಯಿಂದ ನಿಮ್ಮ,**

**✍ಮನೋರಮಾ ಬಿ. ಎನ್**



# ಹಸ್ತ ಮಯೂರಿ

**ನೃತ್ಯದಲ್ಲಿ ಬಳಸಲಾಗುವ ಹಸ್ತಗಳ ಪರಿಚಯದೊಂದಿಗೆ ದೈನಂದಿಕ ಜೀವನದಲ್ಲಿ ಅದರ ಪಾತ್ರವನ್ನು ವಿವೇಚಿಸುವುದು ಹಸ್ತ ಮಯೂರಿಯ ಉದ್ದೇಶ. ಹಸ್ತದ ಕುರಿತಾಗಿ ನಿಮ್ಮ ಗಮನಕ್ಕೆ ಬಂದ ಸಂಗತಿಗಳನ್ನು ಇಲ್ಲಿ ಚರ್ಚಿಸಬಹುದು.**

## ಕರ್ತರೀಮುಖ ಹಸ್ತ





**ಲಕ್ಷಣ :** ತ್ರಿಪತಾಕ ಹಸ್ತದಲ್ಲಿನ ತೋರು ಬೆರಳನ್ನು ಮಧ್ಯಮ ಬೆರಳಿನ ಹಿಂಭಾಗದಲ್ಲಿ ಹಿಡಿದು ಹೆಬ್ಬೆರಳನ್ನು ಕಿರು, ಮತ್ತು ಉಂಗುರ ಬೆರಳಿಗೆ ಮುಟ್ಟಿಸುವುದು. ಇದು ಕತ್ತರಿಯ ಮುಂಭಾಗದಂತೆ ಗೋಚರಿಸುತ್ತದೆ. ಲಾಸ್ಯರಂಜನದ ಕರ್ತರೀಮುಖ ಹಸ್ತಕ್ಕೂ, ಅಭಿನಯದರ್ಪಣದ ಹಸ್ತಕ್ಕೂ ಮಾಡುವ ವಿಧಾನದಲ್ಲಿ ವ್ಯತ್ಯಾಸವಿದ್ದು, ಅಭಿನಯದರ್ಪಣದಲ್ಲಿ, ಹೆಬ್ಬೆರಳನ್ನು ಕಿರು ಹಾಗು ಉಂಗುರ ಬೆರಳಿಗೆ ಮುಟ್ಟಿಸಲಾಗುತ್ತದೆ. ಅದೇ ಲಾಸ್ಯರಂಜನದಲ್ಲಿ ಈ ಹಸ್ತದ ಹೆಬ್ಬೆರಳು ಮುಟ್ಟಿಸಲ್ಪಡುವುದಿಲ್ಲ.

ಈ ಹಸ್ತವನ್ನು ದಿನನಿತ್ಯ ಜೀವನದಲ್ಲಿ ಕತ್ತರಿ, ಎರಡು ಎಂಬ ಸಂಖ್ಯೆ, ತುಂಡು ಮಾಡುವುದು ಎಂಬ ಭಾವಗಳಿಗೆ ಉಪಯೋಗಿಸಲಾಗುತ್ತಿದೆ.

**ವಿನಿಯೋಗ :** ಸ್ತ್ರೀ ಪುರುಷರನ್ನು ಬೇರ್ಪಡಿಸುವುದು, ಇದು-ಅದು ಎಂದು ತರ್ಕ ಮಾಡುವುದು, ಲೂಟಿ, ಕಣ್ಣುಗಳ ಕುಡಿನೋಟ, ಸಾವು, ಭೇದಭಾವ, ಮಿಂಚು, ವಿರಹದಿಂದ ಒಂದೇ ಮಂಚದಲ್ಲಿ ಮಲಗುವುದು, ಪತನ, ಬಳ್ಳಿ.

**ಇತರೆ ವಿನಿಯೋಗ :** ವಿರುದ್ಧ, ಪ್ರತಿಕೂಲ, ವ್ಯತ್ಯಾಸ, ಕಾಲಿಗೆ ಅರಗಿನ ರಸವನ್ನು ಹಚ್ಚುವುದು, ಓಲೆ ಓದುವುದು, ಭೇದಿಸುವುದು, ಹಕ್ಕಿಗಳ ಕೊಕ್ಕು, ನಿಂದಿಸುವುದು, ಶೋಧಿಸುವುದು, ಹೃದಯವಿಕಾರ, ಹೆಚ್ಚು ಗದ್ದಲ, ಕಪಟ, ವೇಗ, ಸ್ತ್ರೀಯರು ತಲೆಸಿಕ್ಕು ಬಿಡಿಸುವುದು, ಕಿರಣ, ಥಳಕು, ಕಳ್ಳತನ, ಸ್ನೇಹ, ಭಂಗ, ಕೋಣ, ಜಿಂಕೆ, ಪರ್ವತ ಶಿಖರ, ಎತ್ತು, ಗರ್ವಭಂಗ, ನಿಂದೆ, ನೆಗೆದು ಧುಮುಕುವುದು, ಕತ್ತರಿ,

**(ಹದಿನಾಲ್ಕನೇ ಪುಟಕ್ಕೆ...)**



# Imaging the gender in Bhararathanatyam -An overview

✍-Padmaja suresh

*[Padmaja is a classical dancer,choreographer, teacher and director of Kalpataru Kalavihar , Institute of Arts which has a charitable wing for training lesser privileged children in performing arts . She is a commerce and Law graduate ,has a Masters in Philosophy and pursues a Phd. from Mysore Univ.at present]*

*Women are suitable to do both male and female roles but can the same be said of men? Worth considering if there is a hidden man inside a woman (the word womanâ also approbates this) and what about vice versa ? We should analyze first on the external front and then the internal levels giving us a gender gallery of contrast and congruity.*

*It is exciting and enhancing for women to drape shirts and trousers designed to befit their style or sometimes even without any variations by wearing typically male dresses . But can one imagine men in sarees or any other typically female attire? Disgusting ,isn't it ? A distortion which is worth only an obliteration ! What men do can be imitated and to counterfeit their appearance to deliberately create a semblance would still be for women, in conformity with norms .*



# ಭರತನಾಟ್ಯದಲ್ಲಿ ಪುರುಷ–ಸ್ತ್ರೀಯರ ನಡುವಿನ ಅಸಮತೆ : ಒಂದು ವಿಮರ್ಶೆ

✍ ಪದ್ಮಜಾ ಸುರೇಶ್

**ಪ್ರಥಮ ಸಂಚಿಕೆಯಲ್ಲಿ ಚರ್ಚಿಸಲಾದ ರಂಗ ಪ್ರವೇಶ ಲೇಖನದ ಕುರಿತಾಗಿ ಎರಡನೇ ಸಂಚಿಕೆಯ ಅಂಗಳದ ಮಾತು, ತಿಂಗಳ ಚರ್ಚೆ ಅಂಕಣದಲ್ಲಿ ಶತಾವಧಾನಿ ಡಾ। ಗಣೇಶ್, ನಾಟ್ಯಾಚಾರ್ಯ ಮುರಳೀಧರ ರಾವ್, ಕಲಾ ವಿಮರ್ಶಕ ಬಿಎಸ್‌ಎಸ್ ರಾವ್ ಅವರ ಅಭಿಪ್ರಾಯಗಳನ್ನು ಪ್ರಕಟಿಸಲಾಗಿತ್ತು.**

**ಇಂತಹ ಸಂವಾದಗಳು ಹಲವು ಲೇಖನದ ಮೂಲಕವೂ ತೆರೆದುಕೊಂಡಿದೆ. ಸಂವಾದಗಳ ಮೂಲಕ ನಮ್ಮ ಅರಿವಿನ ಕ್ಷಿತಿಜವನ್ನು ವಿಸ್ತರಿಸುವ ಗುರಿ ನೂಪುರ ಭ್ರಮರಿಯದ್ದು. ಯಾವುದೇ ಲೇಖನದ ಬಗೆಗಾದರೂ ಮುಕ್ತ ಸಂವಾದಕ್ಕೆ ಅವಕಾಶವಿದೆ. ಅದರಂತೆಯೇ ಕಳೆದ ಬಾರಿ ದರ್ಶನ ಭ್ರಮರಿಯಲ್ಲಿ ನಾಟ್ಯಾಚಾರ್ಯ ಮುರಳೀಧರ ರಾವ್ ಅವರಲ್ಲಿ ಕೇಳಲಾದ ಪ್ರಶ್ನೆ ಭರತನಾಟ್ಯವನ್ನು ಕಲಿಯುವ ಹುಡುಗರ ಕಲಿಕಾ ಪ್ರಕ್ರಿಯೆ ಹೇಗಿರಬೇಕು? ಎಂದು. ಅವರು ಕೊಟ್ಟ ಉತ್ತರ ಬಹಳ ಸಮರ್ಪಕವೂ ಕೂಡ.**

**ಅದಕ್ಕೆ ಪೂರಕವಾಗಿಯೋ ಎಂಬಂತೆ ಕಲ್ಪತರು ಕಲಾವಿಹಾರ ನೃತ್ಯ ಸಂಸ್ಥೆಯ ಗುರು, ನಿರ್ದೇಶಕಿ ಪದ್ಮಜಾ ಸುರೇಶ್ ತಮ್ಮ ಅಭಿಪ್ರಾಯವನ್ನು ಲೇಖನದ ಮೂಲಕ ಬಿಂಬಿಸಿದ್ದಾರೆ. ಕನ್ನಡದಲ್ಲಿ ಓದಲು ಅನುಕೂಲವಾಗುವಂತೆ ಭಾವಾನುವಾದವನ್ನು ಇಲ್ಲಿ ಕೊಡಲಾಗಿದೆ.**

---

ಸ್ತ್ರೀಯರು ನರ್ತನದಲ್ಲಿ ಸ್ತ್ರೀ ಹಾಗೂ ಪುರುಷ ಪಾತ್ರಗಳೆರಡಕ್ಕೂ ಹೊಂದಿಕೊಳ್ಳಬಲ್ಲರು. ಇದನ್ನೇ ಗಂಡಸರಿಗೂ ಅನ್ವಯಿಸಬಹುದೇ? ಸ್ತ್ರೀಯೊಳಗೂ ಒಬ್ಬ ಪುರುಷನಿದ್ದಾನೆಂದು ಭಾವಿಸಿ ಈ ಹೇಳಿಕೆಯನ್ನು ಪರಿಗಣಿಸಬಹುದು. ಅದನ್ನೇ ಪುರುಷರ ಕುರಿತಾಗಿ ಹೇಳಿದರೆ? ಹಾಗಾಗಿ ಪುರುಷ ಹಾಗೂ ಸ್ತ್ರೀಯರ ನಡುವಿನ ಈ ಬಗೆಯ ಭಿನ್ನತೆ ಹಾಗೂ ಸಾಮರಸ್ಯಗಳ ಒಳ ಹೊರಗನ್ನು ವಿಶ್ಲೇಷಿಸೋಣ.

*If a woman could carry herself well with elegance and grace alike, she becomes a true beauty, if she exudes confidence , courage and determination , she becomes a true example, if she can fight a battle and also nurse the wounded, stare boldly yet shed tears , she becomes a legend! But unfortunately though, a man seen crying, lamenting or moaning without sufficient reasons could become a defaced and deformed figure, not befitting his 'Manhood'. Qualities of kindness, warmth, compassion are also extolled in a man but are appealing only if veiled in his inherent, habitual ruggedness. Otherwise, he gets belittled and chided and a crude word effeminate gets attached to him.*

*The corollary of the above is noticed in the world of Bharatanatyam as well . Ordinarily, the dance of Shiva, Lord Nataraja (even His POSE) requires the highest brilliance, sheer pulsating tempo and a powerful vocabulary. If at all one is capable of reproducing this, then may be one or two shades of the cosmic dance becomes visible in the dancer .This is Tandavam; by both male and female dancers exudes delight and aplomb.*

*The other dance aspect of Lasya which is the graceful and charming element is equally delectable but care has to be taken while performed by a male dancer to see that this effect does not linger beyond the stage limits and seep into his persona. It is being commonly remarked by many (meaning no offence to any one in particular) male dancer*



ಇಂದು ಗಂಡಸರ ಉಡುಗೆಗೆ ಕೊಂಚವೂ ವ್ಯತ್ಯಾಸವಿರದ ಹಾಗೆ, ಸ್ಟೈಲ್‌ಗೆ ತಕ್ಕಂತೆ ಶರ್ಟ್ ಅಥವಾ ಟ್ರೌಶರ್‌ಗಳನ್ನು ಧರಿಸುವುದು ಹೆಂಗಸರಿಗೆ ಖುಷಿಯ, ಉತ್ಸಾಹದ ಹಾಗೂ ಪ್ರತಿಷ್ಟೆಯ ವಿಷಯ. ಆದರೆ ಗಂಡಸರನ್ನು ಇಂಥದ್ದೇ ಸ್ತ್ರೀಯರದ್ದಷ್ಟೇ ಅನ್ನಿಸುವ (ಟಿಪಿಕಲ್ ಫಿಮೇಲ್) ಸೀರೆ ಮೊದಲಾದ ದಿರಿಸಿನಲ್ಲಿ ಕಲ್ಪಿಸಿಕೊಂಡರೆ? ಅವಮಾನ ಅನ್ನಿಸುತ್ತದೆಯಲ್ಲವೇ? ಹಾಗೆಂದು ಸ್ತ್ರೀ ಗುಣಲಕ್ಷಣಗಳು, ಫ್ಯಾಷನ್‌ಗಳು ಕೆಲಬಾರಿ ಪುರುಷರಿಂದ ಅನುಕರಿಸಲ್ಪಡುತ್ತದೆಯಾದರೂ, ಅದು ಪ್ರತಿಷ್ಟಾಪಿತ ನಿಯಮಗಳಿಗೆ ಅನುಸಾರವಾಗಿ ಮಾತ್ರ!

ಒಬ್ಬ ಮಹಿಳೆ ಸೌಂದರ್ಯವತಿ ಹಾಗೂ ಸುಸಂಸ್ಕೃತಳಾಗಿದ್ದರೆ, ಸೊಬಗಿನಿಂದಲೂ ಕೂಡಿದ್ದರೆ ಆಕೆ ನಿಜವಾದ ರೂಪಸಿ ಎನಿಸಿಕೊಳ್ಳುತ್ತಾಳೆ! ಯುದ್ಧ ಮಾಡಲು ಗೊತ್ತಿದ್ದು ಗಾಯಗೊಂಡವರನ್ನು ಸೇವೆ ಮಾಡಲು ಸಿದ್ಧಳಿದ್ದರೆ, ದಂತಕಥೆ ಎನಿಸಿಕೊಳ್ಳುತ್ತಾಳೆ. ಆದರೆ ದುರದೃಷ್ಟವೆಂಬಂತೆ ಪುರುಷನೊಬ್ಬ ದುಃಖಿಸುತ್ತಿದ್ದರೆ, ರೋದಿಸುತ್ತಿದ್ದರೆ ಅದನ್ನು ಆತನ ಪುರುಷತ್ವದ ಗುಣಗಳಿಗೆ ಹೊಂದಿಕೆಯಾಗದ್ದು, ಆತನ ಒಟ್ಟಾರೆ ಚಹರೆಗೆ ಒಗ್ಗದಂತದ್ದು ಎನಿಸಿಕೊಳ್ಳುತ್ತದೆ. ದಯೆ ಕರುಣೆ ಮುಂತಾದ ಗುಣಗಳು ಪುರುಷರಿಗೆ ಸಂಬಂಧಿಸಿದಂತೆ ಹೊಗಳಲ್ಪಟ್ಟರೂ ಅವು ಆತನ ಸ್ವಾಭಾವಿಕ ರೂಢ ಒರಟುತನದ ಮರೆಯಲ್ಲಿ ಮಾತ್ರ ಆಕರ್ಷಕ ಎನಿಸಿಕೊಳ್ಳುತ್ತದೆ. ಇಲ್ಲದಿದ್ದಲ್ಲಿ ಆತನನ್ನು ಹೆಣ್ಣಿಗ ಎಂಬ ಶಬ್ದ ಅಂಟಿಸಿ ಕಡೆಗಣಿಸಲಾಗುತ್ತದೆ.

ಈ ಮೇಲಿನ ಅಂಶವನ್ನು ಭರತನಾಟ್ಯ ಪ್ರಪಂಚದಲ್ಲಿಯೂ ಗುರುತಿಸಬಹುದು. ಸಾಮಾನ್ಯವಾಗಿ ನಟರಾಜ ನೃತ್ಯ ಮತ್ತು ಭಂಗಿಗಳಿಗೆ ಅತ್ಯಂತ ಹೆಚ್ಚಿನ ಚಾತುರ್ಯ, ಶುದ್ಧಸ್ಫುರಿತ ತಾಳಗತಿ ಮತ್ತು ಶಕ್ತಿಯುತ ಪದ ಸಂಗ್ರಹ (ವಿಸ್ತಾರವಾದ ನಾಟ್ಯ ಜ್ಞಾನ) ಅವಶ್ಯಕ. ಇದೆಲ್ಲವನ್ನೂ ನರ್ತಕ/ಕಿ ಪ್ರದರ್ಶಿಸಲು ಯೋಗ್ಯನಾ/ಳಾಗಿದ್ದರೆ ಈ ಕಾಸ್ಮಿಕ್ ಡ್ಯಾನ್ಸ್‌ನ ಒಂದೆರಡು ಬಿಂಬಗಳು ನೃತ್ಯಗಾರನ/ಳಲ್ಲಿ ಒಡಮೂಡುತ್ತವೆ. ಸ್ತ್ರೀ ಪುರುಷರಿಬ್ಬರ ತಾಂಡವ-ನೃತ್ಯಗಳಲ್ಲೂ ನೃತ್ಯಕ್ಕೆ ಅಗತ್ಯವಾದ ಆತ್ಮವಿಶ್ವಾಸ ಪ್ರತಿಭೆ ಹಾಗೂ ಅತ್ಯಾನಂದ ಭಾವಗಳು ಪ್ರದರ್ಶನಗೊಳ್ಳುತ್ತವೆ.

ನೃತ್ಯದ ಇನ್ನೊಂದು ಮನೋಹರವಾದ ಅಂಶವೆನಿಸುವ ಲಾಸ್ಯ ಕೂಡ ಅಷ್ಟೇ ಮಾಧುರ್ಯವುಳ್ಳದ್ದಾಗಿದೆ. ಆದರೆ ಲಾಸ್ಯವು ಪುರುಷ ಕಲಾವಿದರಿಂದ ಪ್ರದರ್ಶಿಸಲ್ಪಡುವಾಗ ಲಾಸ್ಯ ಭಾವದಲ್ಲಿ ರಂಗನಿಯಮಗಳು ಮಿತಿ ದಾಟದಂತೆ ಮತ್ತು ಅದು ಆತನ ಆಂತರಿಕ

*especially in Bharatanatyam , happens to sacrifice unknowingly or unwantedly, his virile stride, mannerisms and macho image. Instead, the kind of dancer articulations usually associated with women, look more pronounced in him than his very own manliness . To tackle the situation , a pragmatic reaction without emotional bias or penchant to this allegation is essential.*

*It is worth noting here that the male dancers rarely performed those days but often taught as Nattuvanars. It is related to the Purusha - Prakriti dualism embodied in the dualism of the human nature. Purusha (the macrocosm) remains unmoved whereas Prakriti (containing the Purusha atom or seed as microcosm) is permitted to oscillate .It was felt not without any grounds that a woman's body is better suited for performing this dance, while a man's mind is better at analyzing and teaching it. Learning from the traditional lineage of male Gurus gave the girls the best training to dance and blend the dualities cohesively.*

*This disparity and insinuation regarding the style of male dancers would remain as long as mans age old perception of beauty and philosophy of aesthetics having been fortified by historical and mythological role models ,would remain.*





ವ್ಯಕ್ತಿತ್ವ(perasona)ದ ಒಳಗೆ ಇಳಿಯದಂತೆ ವಿಶೇಷ ಕಾಳಜಿ ತೆಗೆದುಕೊಳ್ಳಬೇಕಾಗುತ್ತದೆ. ಭರತನಾಟ್ಯದಲ್ಲಿ ಪುರುಷ ಕಲಾವಿದರು ತಮಗೆ ಅರಿವಿಲ್ಲದಂತೆಯೇ ಅಥವಾ ಅನಿವಾರ್ಯವಾಗಿ ಪುರುಷ ಸಹಜ ಬಿರುಸು-ನಡವಳಿಕೆ ಹಾಗೂ'ಮ್ಯಾಚೋ' ಇಮೇಜ್‌ಗಳನ್ನು ತ್ಯಾಗ ಮಾಡುವಂತಾಗುತ್ತದೆ. ಬದಲಾಗಿ ಸ್ತ್ರೀಗೆ ಸಂಬಂಧಿಸಿದ ನೃತ್ಯ ಶೈಲಿ ಹೆಚ್ಚಾಗಿ ಅಭಿವ್ಯಕ್ತಗೊಳ್ಳುತ್ತದೆ ಎಂದು ಹಲವರು ಟೀಕಿಸುತ್ತಾರೆ. ಈ ಪರಿಸ್ಥಿತಿಯನ್ನು ಎದುರಿಸಲು ವಾಸ್ತವಿಕವಾದ ಪ್ರಯೋಗಶೀಲ ಹಾಗೂ ಅರ್ಥಪೂರ್ಣ ಪ್ರತಿಕ್ರಿಯೆಯ (ಭಾವನಾತ್ಮಕ ಪೂರ್ವಾಗ್ರಹಗಳಿಗೆ ಹೊರತಾದ ಪ್ರತಿಕ್ರಿಯೆ) ಅಗತ್ಯವಿದೆ.

ಇಲ್ಲಿ ಇನ್ನೊಂದು ವಿಷಯವನ್ನು ಉಲ್ಲೇಖಿಸಬಹುದು. ಹಿಂದಿನ ದಿನಗಳಲ್ಲಿ ನರ್ತಕರು ಅಪರೂಪವೆಂಬಂತೆ ಪ್ರದರ್ಶನ ಕೊಡುತ್ತಿದ್ದು, ನಟ್ಟುವನ್ನಾರ್ ಆಗಿ ತರಬೇತಿ ಪಡೆಯುತ್ತಿದ್ದುದೇ ಹೆಚ್ಚಾಗಿತ್ತು. ಇದು ಮಾನವ ಸ್ವಭಾವದ ದ್ವಂದ್ವಗಳಲ್ಲಿ ಒಂದಾದ ಪುರುಷ-ಪ್ರಕೃತಿ ದ್ವಂದ್ವಕ್ಕೆ ಸಂಬಂಧಿಸಿದುದು. ಪುರುಷ (ಮ್ಯಾಕ್ರೋಕಾಸಂ) ನಿಶ್ಚಲವಾಗಿದ್ದರೆ ಪ್ರಕೃತಿ (ಪುರುಷ ಅಣುವನ್ನು ಅಥವಾ ಬೀಜವನ್ನು ಮೈಕ್ರೋಕಾಸ್ಮಿಕ್ ರೂಪದಲ್ಲಿ ಹೊಂದಿರುವಂತದ್ದು) ಸಂಚಾರೀ ಗುಣವುಳ್ಳದ್ದಾಗಿದೆ. ಅಂದು ಸ್ತ್ರೀಯರ ಶರೀರ ಭರತನಾಟ್ಯದ ಪ್ರದರ್ಶನಕ್ಕೆ ಸೂಕ್ತವಾದದ್ದಾದರೆ ಪುರುಷನ ಬುದ್ಧಿ ಈ ನೃತ್ಯವನ್ನು ವಿಶ್ಲೇಷಿಸುವುದಕ್ಕೆ, ಕಲಿಸುವುದಕ್ಕೆ ಸೂಕ್ತವಾದ ಎಂದು ನಂಬಲಾಗುತ್ತಿತ್ತು. ಪಾರಂಪರಿಕವಾಗಿ ಪುರುಷಗುಣಗಳಿಂದ ಈ ಫಲವಾಗಿ ಈ ದ್ವಂದ್ವಗಳ ಸೂಕ್ತ ಮಿಶ್ರಣ ಸಾಧ್ಯವಾಯಿತು, ನರ್ತಕಿಯರಿಗೆ ಅತ್ಯುತ್ತಮ ನೃತ್ಯ ತರಬೇತಿಯೂ ದೊರಕುತ್ತಿತ್ತು.

ಚಾರಿತ್ರಿಕ ಹಾಗೂ ಪೌರಾಣಿಕ ಆದರ್ಶಗಳಿಂದ ಬಲಪಡಿಸಲ್ಪಟ್ಟ ಮನುಷ್ಯನ ಸೌಂದರ್ಯ ಮೀಮಾಂಸೆಯ ತತ್ವಗಳ ಪುರಾತನ ಗ್ರಹಿಕೆಯು ಎಲ್ಲಿಯವರೆಗೆ ಹೀಗೆ ಉಳಿಯುತ್ತದೋ ಅಲ್ಲಿಯವರೆಗೂ ಪುರುಷ ಕಲಾವಿದರ ಕುರಿತಾದ ಈ ಅಸಮತೆಯ ಕುಹಕ ಉಳಿದೇ ಇರುತ್ತದೆ.




✍ ವೈಷ್ಣವಿ . ಎನ್

**ಯಾವುದೇ ನೃತ್ಯ ಪ್ರಕಾರದ ವಿವಿಧ ನೃತ್ಯ ಬಂಧಗಳ ಸಮಗ್ರ ನೋಟ, ವಿಮರ್ಶೆಯನ್ನು ಒದಗಿಸುವುದು ನರ್ತನ ಸುರಭಿಯ ಉದ್ದೇಶ. ಆ ಮೂಲಕ ನಾವು ರಂಗದ ಮೇಲೆ ಕಾಣುವ ನೃತ್ಯ ಸೌಂದರ್ಯದ ವಿವಿಧ ಮಜಲುಗಳ ಪುಟ್ಟ ಅಧ್ಯಯನದ ರೂಪ ನಿಮ್ಮೆದುರಿಗೆ..ಇದು ಸಂವಾದಗಳಿಗೆ ವೇದಿಕೆಯೂ ಆಗಬೇಕು. ಈಗಾಗಲೇ ಭರತನಾಟ್ಯ ಸಂಪ್ರದಾಯದ ಅಲರಿಪು, ಜತಿಸ್ವರ, ಶಬ್ದದ ಸಾದ್ಯಂತ ಚರ್ಚೆಗಳು ನಿಮ್ಮೆದುರಿಗೆ ಅನಾವರಣಗೊಂಡಿವೆ. ಇದೀಗ ಸುದೀರ್ಘವಾಗಿ ವರ್ಣದ ವರ್ಣಮಯ ಚಿತ್ತಾರ...**

ಭರತನಾಟ್ಯದ ನಾಲ್ಕನೆಯ ಅಂಗವೇ ವರ್ಣ. ಕರ್ನಾಟಕ ಸಂಗೀತ ಸಂಪ್ರದಾಯದಲ್ಲಿ ಮತ್ತು ನೃತ್ಯ ಕ್ಷೇತ್ರದಲ್ಲಿ ಪ್ರಬುದ್ಧತೆಯ, ವಿದ್ವತ್ತಿನ ಸೂಚಕವಾದ, ಕಠಿಣವೂ, ಪರಿಣಾಮಕಾರಿಯೂ ಆದ ವರ್ಣ ಅತೀ ಶ್ರೇಷ್ಠ ವರ್ಗ ಎಂಬ ಖ್ಯಾತಿಯದ್ದು.

ವರ್ಣವೆಂಬುದು ಭಾವ ರಾಗ ತಾಳಗಳ ಅತ್ಯುತ್ತಮ ಪಾಕ. ಸಾಹಿತ್ಯಕ್ಕೆ ಅಭಿನಯಿಸುತ್ತಾ, ಹಸ್ತಮುದ್ರೆಗಳನ್ನು ಪ್ರದರ್ಶಿಸುತ್ತಾ, ಭಾವಗಳನ್ನು ಕಣ್ಣುಗಳಿಂದಲೂ, ಗತಿ-ನಡೆಗಳನ್ನು ಪಾದಗಳಿಂದ ಏಕಕಾಲಕ್ಕೆ ತೋರಿಸುವ ವಿಶಿಷ್ಟ ಕ್ರಿಯೆ ವರ್ಣವೊಂದರಲ್ಲೇ ಕಂಡುಬರುತ್ತದೆ.

ವರ್ಣವು ಕರ್ನಾಟಕ ಸಂಗೀತ ಮತ್ತು ಭರತ ನೃತ್ಯದಲ್ಲಿ ಕಲ್ಪನಾ ವಿಲಾಸದ ಅತ್ಯಂತ ಸ್ವಾರಸ್ಯ, ಸಂಕೀರ್ಣ ಸಂಯೋಜನೆ. ಸಂಗೀತಗಾರ ತನ್ನ ಹಾಡುಗಾರಿಕೆಗೆ ತಕ್ಕ ಮನೋಧರ್ಮವನ್ನು ತಂದು ರಾಗಭಾವ ಲಹರಿಗಳಲ್ಲಿ ಸಂಗೀತದ ಭವ್ಯ ಸೌಧವನ್ನು ಕಟ್ಟಿದರೆ, ಕಲಾವಿದೆಯು ಅದಕ್ಕನುಗುಣವಾಗಿ ಸಂಚಾರೀ ಭಾವಗಳ ಮೂಲಕ ವಿಜೃಂಭಿಸುತ್ತಾಳೆ. ಈ ಮೂಲಕ ರಂಗವು ಸಂಪೂರ್ಣತೆಯ ವಿರಾಟ್



ಸ್ವರೂಪದಿಂದ ಶೋಭಿಸುತ್ತದೆ. ಹಾಗಾಗಿ ವಿದ್ವಾಂಸರು ನೃತ್ಯ ಪ್ರದರ್ಶನದಲ್ಲಿ ಹಿರಿಯ ಮಟ್ಟದ ವರ್ಣವನ್ನು ಕಾಣಲು ತವಕಪಡುತ್ತಾರೆ.

ಇದುವರೆಗೆ ನೃತ್ಯ ಕಾರ್ಯಕ್ರಮದಲ್ಲಿ ಪ್ರದರ್ಶಿಸಿದ ಅಲರಿಪು, ಜತಿಸ್ವರ, ಶಬ್ದ- ಇವುಗಳಲ್ಲಿ ಯಾವ-ಯಾವ ಅಂಶಗಳನ್ನು ಒಂದಾದ ಮೇಲೊಂದರಂತೆ ಸೇರಿಸಿ ಶಾಸ್ತ್ರ ಸಂಪತ್ತನ್ನು ಹೆಚ್ಚಿಸುತ್ತಾ ಬಂದಿದ್ದಾರೋ ಅವುಗಳನ್ನು ಇದರಲ್ಲಿ ಉಳಿಸಿ, ಹೊಸ ಅಭಿಪ್ರಾಯವನ್ನು ಸೇರಿಸುವುದು ಒಂದು ಕೌಶಲ್ಯ. ಈ ದೃಷ್ಟಿಯಿಂದ ವರ್ಣವು ಯೋಗಶಾಸ್ತ್ರದ ಪ್ರತ್ಯಾಹಾರ ಎಂಬ ಐನೆಯ ಅಂಗವನ್ನು ಆಧಾರವಾಗಿಟ್ಟುಕೊಂಡಿದೆಯೆಂಬುದು ವಿಮರ್ಶಕರ ಅಭಿಪ್ರಾಯ.

ವರ್ಣಗಳಲ್ಲಿ ತಾನವರ್ಣ, ಪದವರ್ಣ, ಚೌಕವರ್ಣ, ಸ್ವರಜತಿ ವರ್ಣ, ಅವುಧಾನ ವರ್ಣ ಎಂಬ ಬಗೆಗಳಿವೆ.

ಸಂಗೀತದಲ್ಲಿ ಕಾಣಲಾಗುವುದೇ ತಾನವರ್ಣ. ತಾನವರ್ಣಗಳು ವಿಳಂಬ ಕಾಲದಲ್ಲಿದ್ದು ಅಕ್ಷರ ಕಾಲವು ನೀಳವಾಗಿರುತ್ತದೆ. ತಾನವರ್ಣಗಳಲ್ಲಿ ಪಲ್ಲವಿ, ಅನುಪಲ್ಲವಿ ಮತ್ತು ಎತ್ತುಗಡೆ ಸ್ವರಗಳಲ್ಲಿ ಮಾತ್ರ ಸಾಹಿತ್ಯ ಪ್ರವೇಶವಾಗಿ ಉಳಿದ ಭಾಗಗಳಲ್ಲಿ ಸ್ವರಗಳೇ ಪ್ರಧಾನವಾಗಿರುತ್ತದೆ. ಪಲ್ಲವಿ, ಅನುಪಲ್ಲವಿಯಲ್ಲಿಯೂ ಸಹ ಸಾಹಿತ್ಯಭಾಗವು ಕೀರ್ತನೆಗಳಂತೆ ಒಟ್ಟಿಗಿರದೆ ಸಾಹಿತ್ಯಾಕ್ಷರವು ಬಿಡಿಬಿಡಿಯಾಗಿ ದೂರ ದೂರವಾಗಿರುತ್ತದೆ. ಭಕ್ತಿಪೂರ್ವಕ ಶೃಂಗಾರ, ತಾಳ-ರಾಗಸ್ಫುಟತೆ ಹೊಂದಿರುತ್ತವೆ, ವಿದ್ಯಾರ್ಥಿಗಳು ಅಕಾರ, ಇಕಾರ, ಒಕಾರದ ಮೂಲಕ ಸ್ವರ ಸ್ಥಾನವನ್ನು ನಿಗದಿ ಮಾಡಿ, ಸ್ವರ ಜ್ಞಾನವನ್ನು ಸಂಪಾದಿಸಿಕೊಳ್ಳಲು ಅರ್ಹತೆ ಪಡೆಯಬೇಕೆಂಬ ಪೂರ್ವಾಲೋಚನೆಯಿಂದ ಸಿದ್ಧಪಡಿಸಿದ್ದು ತಾನವರ್ಣ. ಇದರಿಂದ ವಿದ್ಯಾರ್ಥಿಗಳಿಗೆ ಮನೋಧರ್ಮದಂತೆ ಕಲ್ಪನಾಸ್ವರಗಳನ್ನು ಹಾಡುವ ಸಾಮರ್ಥ್ಯವು ಹಂತಹಂತವಾಗಿ ದೊರಕುತ್ತದೆ. ಇಂದಿಗೂ ಸಂಗೀತ ಕಚೇರಿಯ ಪ್ರಾರಂಭ ತಾನವರ್ಣದಿಂದಲೇ ಮೊದಲ್ಗೊಳ್ಳುವುದು ಪದ್ಧತಿ.

ಪದವರ್ಣಗಳಲ್ಲಿ ಸಾಹಿತ್ಯ ಭಾಗವು ಸ್ವರಗಳಷ್ಟೇ ಮುಖ್ಯ. ಚಿಟ್ಟೆಸ್ವರಗಳಿಗೂ ಸಾಹಿತ್ಯವನ್ನು ಕಾಣಬಹುದು. ತಾನವರ್ಣಗಳು ನೃತ್ಯಕ್ಕೆ ಬೇಕಾಗುವ ಸಾಮಗ್ರಿಗಳನ್ನು

ಅಷ್ಟಾಗಿ ಒದಗಿಸುವುದಿಲ್ಲವಾದ್ದರಿಂದ, ಭಾವಾಭಿನಯಕ್ಕೆ ಸರಿಹೊಂದುವ ಸಾಹಿತ್ಯವನ್ನು ರಚಿಸಿ ಪದವರ್ಣಗಳ ರೂಢಿಯನ್ನು ತಂದಿದ್ದಾರೆ. ಆದರೂ ವರ್ಣ ಎಂಬ ನೃತ್ಯಭಾಗಕ್ಕೆ ಸಂಗೀತ ಸಂಪ್ರದಾಯದ ತಾನವರ್ಣವೇ ಆಧಾರವೆಂಬುದು ಸ್ಪಷ್ಟ. ಇಂದಿಗೂ ಸರಸಿಜನಾಭ, ಚಲಮೇಲ ವರ್ಣಗಳು ಸಾಮಾನ್ಯವಾಗಿ ನೃತ್ಯದಲ್ಲಿ ಬಳಸಲ್ಪಡುವ ತಾನವರ್ಣಗಳು. ತಾನವರ್ಣ ಮಾಡಲು ಹೆಚ್ಚಿನ ಶಕ್ತಿಯೂ, ತಾಳ್ಮೆಯೂ ಬೇಕು. ವಿಳಂಬಗತಿಯ ಅನುಸರಣೆ(ಮಾರ್ಗಕಾಲವೆನ್ನುತ್ತಾರೆ), ಶೃಂಗಾರ ಪದಗಳ ಗತಿ, ಲಕ್ಷಣವಿರುವುದರಿಂದ ನೃತ್ಯಕ್ಕೆ ಅನುಗುಣವಾಗಿ ಪದವರ್ಣವೆನ್ನುವುದನ್ನು ರಚಿಸಲಾಗಿದೆ.

ಸಂಗೀತದಲ್ಲಿ ಸ್ವರಜತಿ ಎನ್ನುವ ರಚನೆಗಳಿದ್ದು ಇದರಲ್ಲಿ ಪಲ್ಲವಿಯ ನಂತರ ಸ್ವರಜೋಡಣೆಗೆ ಅನುಗುಣವಾಗಿ ಸಾಹಿತ್ಯವಿರುತ್ತದೆ. ಆದರೆ ನೃತ್ಯಕ್ಕೆ ಬಳಸುವ ಸ್ವರಜತಿಗಳು ಸಂಪೂರ್ಣವಾಗಿ ಪದವರ್ಣದ ರೂಪದಲ್ಲಿರುತ್ತದೆ. ಸ್ವರಜತಿ ವರ್ಣಗಳು ಪದವರ್ಣದ ಲಕ್ಷಣಗಳನ್ನೇ ಹೊಂದಿದ್ದು, ಚಿಟ್ಟೆಸ್ವರದಲ್ಲಿ ಸ್ವಲ್ಪ ವ್ಯತ್ಯಾಸವಿರುತ್ತದೆ. ಉದಾ: ಸಾಮಿನಿ ರಮ್ಮಾನವೇ, ಏ ಮಂದಯಾನರಾ, ನೇಟಿಕಿ ದಯ, ಸ್ವಾಮಿ ಮೇಲ್, ಸರಸಿಜಾಕ್ಷಿರೋ. ಇಂತಹ ವರ್ಣಗಳು ಸಾಮಾನ್ಯವಾಗಿ ಶೃಂಗಾರ, ಭಕ್ತಿಭಾವಗಳನ್ನು ವರ್ಣಿಸುತ್ತವೆ.

ವರ್ಣ ಎಂಬ ಶಬ್ದ ಹುಟ್ಟಿದ ರೀತಿಯನ್ನು ತಿಳಿದುಕೊಳ್ಳುವುದಾದಲ್ಲಿ ಸಂಸ್ಕೃತದಲ್ಲಿ ದೀರ್ಘವಾದ ವ್ಯಾಖ್ಯಾನವಿದೆ. ಅದರ ಪ್ರಕಾರ

**ವರ್ಣಃ** ಎಂದರೆ– ಚಿನ್ನ, ಕಥೆ, ಆನೆಯ ಮೇಲೆ ಹಾಕುವ ಚಿತ್ರಕಂಬಳಿ, ಸ್ತೋತ್ರ, ಸಮುದಾಯ, ಕಾಂತಿ, ಕೀರ್ತಿ.

**ವರ್ಣಂ** ಎಂದರೆ– ಕ್ಷತ್ರಿಯ ಮೊದಲಾದ ಜಾತಿ, ಗಾನ, ಬ್ರಹ್ಮ, ಬಿಳುಪು, ಕೆಂಪು, ಕಪ್ಪು ಮುಂತಾದ ಬಣ್ಣ, ಅಕ್ಷರ, ಶ್ಲಾಘನೆ.

ಹಾಗಾಗಿ ಕೀರ್ತಿ, ಅಕ್ಷರ, ಗಾನ, ಸ್ತೋತ್ರ ಎಂಬುದನ್ನು ಗಮನದಲ್ಲಿರಿಸಿದರೆ ಈ ಪ್ರಕಾರದ ನೃತ್ಯಕ್ಕೆ ವರ್ಣ ಎಂಬ ಹೆಸರು ಅನ್ವರ್ಥ ಎಂಬುದು ವಿಮರ್ಶಕರ ಅನಿಸಿಕೆ.



ಸಾದಿರ್ ಪದ್ಧತಿ (ಇಂದಿನ ಭರತನಾಟ್ಯ) ಯಲ್ಲಿ ವರ್ಣಕ್ಕೆ ಉತ್ತಮ ಚಾರಿತ್ರಿಕ ಹಿನ್ನಲೆಯಿದೆ. ಸಾದಿರ್ ಮೂಲರೂಪವು (ಅಲರಿಪ್ಪುವಿನಿಂದ ತಿಲ್ಲಾನದವರೆಗೆ) ಮುಂಚೆಯೇ ಇತ್ತಾದರೂ, ಅದಕ್ಕೆ ಅಲಂಕಾರ ಕೊಟ್ಟು ಆದರಣೀಯವಾಗಿಸಿದ್ದು ತಂಜಾವೂರು ಸಹೋದರರು.

ವರ್ಣದ ಹುಟ್ಟಿನ ಬಗೆಗೆ ಹೇಳುವುದಾದಲ್ಲಿ ವಿದ್ವಾಂಸರು ಇನ್ನೊಂದು ತರ್ಕವನ್ನು ಮುಂದಿಡುತ್ತಾರೆ. ವೆಂಕಟಮುಖಿ ೭೨ನೇ ಮೇಳಕರ್ತ ರಾಗವು ಸಂಪ್ರದಾಯಕ್ಕೆ ಬಂದ ಮೇಲೆ, ವಿದ್ವಾಂಸರು ಹೊಸ–ಹೊಸ ರಾಗಗಳನ್ನು ಬಳಕೆಗೆ ತಂದರು. ರಾಗಗಳ ಸಂಪೂರ್ಣ ಸ್ವರೂಪಕ್ಕೆ ವೀಣೆಯು ಮುಖ್ಯ. ವೀಣೆಗೆ ಹೊಂದಿಕೊಂಡು ವರ್ಣವನ್ನು ರಚಿಸಲಾಯಿತು. ಭರತನು ನಾಟ್ಯಶಾಸ್ತ್ರದಲ್ಲಿ ತಂತಿವಾದ್ಯದ ಕುರಿತಾಗಿ ಹೇಳುವಾಗ ವರ್ಣ ಮತ್ತು ಅಲಂಕಾರಗಳೆಂಬ ಹೆಸರನ್ನು ಬಳಸಿದ್ದಾನೆ. ಅಂದಿನಿಂದ ವರ್ಣವು ವೀಣೆ ಹೇಳಿದ ಕೃತಿಯಾಗಿ ಪ್ರಚಲಿತವಾಯಿತು.ಈ ಸಂದರ್ಭ ಸುಮಾರು ೧೮ನೇ ಶತಮಾನದಲ್ಲಿ ಪ್ರವರ್ಧಮಾನಕ್ಕೆ ಬಂತೆನ್ನಲಾಗಿದೆ.

ವರ್ಣ ಪ್ರೇಕ್ಷಕರ ಮತ್ತು ವಿಮರ್ಶಕರ ದೃಷ್ಟಿಯಲ್ಲಿ ದೊಡ್ಡದೆನಿಸುವಷ್ಟರಲ್ಲೇ ಇದರ ಅಂತಃಸ್ಸತ್ವ ಹುದುಗಿಲ್ಲ. ಬದಲಾಗಿ, ವಿನ್ಯಾಸಗಳನ್ನು ಪ್ರದರ್ಶಿಸಬೇಕಾದ ಶರೀರ, ಭಾವಾಭಿನಯವನ್ನು ಪ್ರದರ್ಶಿಸಬೇಕಾದ ಮನಸ್ಸನ್ನು ಸಮಪ್ರಮಾಣದಲ್ಲಿ ಕಾರ್ಯೋನ್ಮುಖವಾಗುವಂತೆ ನಿಯೋಜಿಸುವುದು ವರ್ಣದ ವೈಶಿಷ್ಟ್ಯ.

- **ವಿ. ಎಸ್. ಕೌಶಿಕ್ ಅವರು ವರ್ಣದ ಬಗ್ಗೆ ಏನು ಹೇಳುತ್ತಾರೆ?**
- **ವರ್ಣದ ನೃತ್ಯ ಸಂಯೋಜನೆ ಹೇಗೆ? ರಚಿಸಿದವರು ಯಾರು?**
- **ಪುರುಷರ ಅಭಿನಯಕ್ಕೆ ವರ್ಣಗಳು ಎಷ್ಟರ ಮಟ್ಟಿಗೆ ಸೂಕ್ತ?**
- **ವರ್ಣಗಳ ಪ್ರಸ್ತುತತೆ ಹೇಗಿದೆ?**



**ನಿರೀಕ್ಷಿಸಿ... ಮುಂದಿನ ನರ್ತನ ಸುರಭಿಯಲ್ಲಿ...**



(..ಮೂರನೇ ಪುಟದಿಂದ...) **ಹಸ್ತ ಮಯೂರಿ**

ಅಡಿಕೆಯನ್ನು ಕತ್ತರಿಸುವುದು, ಮಕ್ಕಳು ಅಂಬೆಗಾಲಿಕ್ಕುವುದು, ದಾರಿನಡೆಯುವವನು, ಕೈಯನ್ನು ಮೇಲೆ ಮಾಡಿ ಕತ್ತರಿಸುವುದು, ಒಂದನ್ನು ಒಂದರ ಹಿಂದಿಡುತ್ತಾ ಮುಖಕ್ಕೆ ಕತ್ತರಿಯಿಂದ ಗಾಯ ಮಾಡುವುದು, ಮಕ್ಕಳು ತೆವಳುವುದು, ಕೊಂಬು, ಅಪರಾಧ, ಒತ್ತೆಯಿಡುವುದು, ದಾರಿತೋರಿಸುವುದರ ಸಂವಹನಕ್ಕೆ ಬಳಸಲಾಗುತ್ತದೆ.

ನಾನಾರ್ಥಹಸ್ತಗಳ ಪ್ರಕಾರದಲ್ಲಿ, ಕರ್ತರೀಮುಖ ಹಸ್ತವನ್ನು ಪುರೋಭಾಗದಲ್ಲಿ ಕಂಪಿಸುವಂತೆ ಮಾಡಿದರೆ ದ್ವೈಧೀಭಾವ (ರಾಜನೀತಿಯಲ್ಲಿ ಇಬ್ಬಗೆಯ ನೀತಿಯನ್ನು ಅನುಸರಿಸುವ ಗುಣ) ಎಂಬರ್ಥದಲ್ಲಿ ಉಪಯೋಗಿಸಬಹುದು.ಭರ್ತೃಭಾರ್ತೃಹಸ್ತ (ಗಂಡ ಮತ್ತು ಸೋದರ) ದುಂಧುಭ ಎಂಬ ವಿಷಕಾರಿ- ಎರಡು ತಲೆಯುಳ್ಳ ಹಾವು ಮತ್ತು ಹಿಂತಲ, ಶಮಿ, ಕುರುವಕ ಮುಂತಾದ ವೃಕ್ಷಗಳ ಸೂಚನೆಗಾಗಿ ಕರ್ತರೀಮುಖಹಸ್ತಗಳನ್ನು ಬಳಸುತ್ತಾರೆ.



**ಜ್ವಾಲಾಮಾಲಾಕುಲ ಜಗದ್ರೂಪ ತಾಂಡವದಿ**
**ಲೀಲೆಯಿಂ ಜೀವತೆಯನಾಂತು ಪರಬೊಮ್ಮಂ**
**ತಾಳಲಯಮೇಳನದಿನೊಮ್ಮೆ ರಭಸದಿನೊಮ್ಮೆ**
**ಲೋಲನಾಗಿರ್ಪನೆಲೊ ಮಂಕುತಿಮ್ಮ**

**-ಡಿ. ವಿ. ಜಿ**



# ದರ್ಶನ ಭ್ರಮರಿ



## ವಿದುಷಿ ಬಿ. ಕೆ. ವಸಂತಲಕ್ಷ್ಮಿ

**ಸಾದಿರ್ ಪದ್ಧತಿಯ ನೃತ್ಯಕ್ಕೆ ಭರತನಾಟ್ಯವೆಂಬ ಶುದ್ಧ ರೂಪವನ್ನು ಕೊಟ್ಟ ತಮಿಳ್ನಾಡಿನ ಕಲಾಕ್ಷೇತ್ರದ ಗುರು ರುಕ್ಮಿಣೀದೇವಿ ಅರುಂಡೇಲ್ ಮತ್ತು ಮೈಸೂರು ಶೈಲಿಯ ಅಗ್ರ ಗುರು ವೆಂಕಟಲಕ್ಷ್ಮಮ್ಮ ಅವರ ಶಿಷ್ಯರುಗಳಲ್ಲಿ ಬಿ. ಕೆ. ವಸಂತಲಕ್ಷ್ಮಿ ಅವರದ್ದು ಮೊದಲ್ಪಂಕ್ತಿಯ ಹೆಸರು. ಭರತನಾಟ್ಯದ ಹಿರಿಯ ಗುರು ಕೇಶವ ನೃತ್ಯಶಾಲಾದ ದಿವಂಗತ ಎಚ್. ಆರ್. ಕೇಶವಮೂರ್ತಿ ಅವರ ಪುತ್ರಿ. ಬೆಂಗಳೂರು ವಿಶ್ವವಿದ್ಯಾನಿಲಯದ ಭರತನಾಟ್ಯ ಸ್ನಾತಕೋತ್ತರ ಕಲಾಪ್ರದರ್ಶನ ವಿಭಾಗದ ಉಪನ್ಯಾಸಕರಾಗಿ, ಮಾಧ್ಯಮಿಕ ನೃತ್ಯ ಪರೀಕ್ಷಾ ಪಠ್ಯಪುಸ್ತಕ ರಚನಾ ಸಮಿತಿ ಮತ್ತು ಮೈಸೂರು ವಿಶ್ವವಿದ್ಯಾಲಯದ ಕಲಾ ಪ್ರದರ್ಶನ ವಿಭಾಗದ ಸದಸ್ಯರಾಗಿ ಸೇವೆ. ಹಲವು ಪ್ರತಿಷ್ಠಿತ ಪ್ರಶಸ್ತಿ, ಫೆಲೋಶಿಪ್‌ಗಳೊಂದಿಗೆ ‘ಕರ್ನಾಟಕ ಕಲಾಶ್ರೀ’ಗೌರವ. ಪ್ರಸ್ತುತಃ ಬೆಂಗಳೂರಿನಲ್ಲಿ ತಮ್ಮ ವಿಶ್ರುತ ಸ್ಕೂಲ್ ಆಫ್ ಪರ್‌ಫಾರ್ಮಿಂಗ್ ಆರ್ಟ್ಸ್ ನ ಮುಖ್ಯಸ್ಥೆಯಾಗಿ ಹಲವು ಶಿಷ್ಯರಿಗೆ ಮೆಚ್ಚಿನ, ಶಿಸ್ತಿನ ಗುರು.ಅವರೀಗ ನಮ್ಮ ಅತಿಥಿ..**

**೧. ನೃತ್ಯದ ತೀರಾ ಶಾಸ್ತ್ರೀಯತೆಯೇ ಅದನ್ನು ಅರ್ಥ ಮಾಡಿಕೊಳ್ಳಲು ಕಷ್ಟವಾಗುತ್ತಿದೆ ಎನ್ನಲಾಗುತ್ತಿದೆ. ಇದಕ್ಕೆ ನೀವೇನಂತೀರಿ?**

ಶಾಸ್ತ್ರೀಯವಾಗಿರುವುದಕ್ಕೇ ಅದು ಶಾಸ್ತ್ರೀಯ ನೃತ್ಯ. ಶಾಸ್ತ್ರೀಯ ನೃತ್ಯ ಎಲ್ಲರಿಗೂ ಬೇಗ ಅರ್ಥ ಆಗೋದಿಲ್ಲ, ಅಂದಾಕ್ಷಣ ಅದು ನೃತ್ಯದ ದೋಷವಲ್ಲ, ವೀಕ್ಷಕರು ಪೆದ್ದರು ಎಂದರ್ಥವೂ ಅಲ್ಲ. ಜನರಿಗೆ ಅರ್ಥವಾಗೋದಿಲ್ಲ, ಗೊತ್ತಿಲ್ಲ ಎಂಬ ಭಾವವೇ ತಪ್ಪು.

ಗೊತ್ತಿರುವ ಕಥೆಗಳಿಂದ ಹೆಣೆದ ನೃತ್ಯವಾದರೆ, ನೋಡಿ ಬೇಗನೆ ಅರ್ಥ ಮಾಡಿಕೊಳ್ತಾರೆ. ಅಂತಹ ಅಭಿಪ್ರಾಯ ಕಲಿಯದಿದ್ದವರಿಗೆ ಅರ್ಥ ಆಗೋದು ಕಡಿಮೆ ಎಂದದ್ದಕ್ಕಿರಬೇಕೇ ವಿನಃ, ಅರ್ಥ ಆಗುವ ಸಂಭವಗಳು ಕಡಿಮೆ ಎಂದಲ್ಲ. ಕೆಲವೊಮ್ಮೆ ಸೀದಾ ಪಕ್ಕಾ ಶಾಸ್ತ್ರೀಯವಾಗಿ ಮಾಡಿದಾಗ ಅರ್ಥ ಆಗದೇ ಹೋಗುವ ಸಂದರ್ಭಗಳಿರಬಹುದು. ಆದರೆ ಆಸಕ್ತಿಯಿಟ್ಟು ನೋಡಿದರೆ ಅರ್ಥ ಆಗೇ ಆಗುತ್ತದೆ. ಅದರಲ್ಲೂ ವೀಕ್ಷಕರ ಐಕ್ಯೂ ಮೇಲೆ ಅರ್ಥ ಮಾಡಿಕೊಳ್ಳುವ ಶಕ್ತಿಯೂ ನಿರ್ಧರಿತವಾಗಿರುತ್ತದೆ. ಅಷ್ಟಕ್ಕೂ ಕಲಾವಿದೆಯ ನೈಪುಣ್ಯತೆಯೂ ಇಲ್ಲಿ ಪ್ರಮುಖ. ಜೊತೆಗೆ ಗುರುಗಳ ಪಾಠ ಮಾಡುವ ಶೈಲಿ, ಸಾಮರ್ಥ್ಯವೂ ಇಲ್ಲಿ ನಿಗದಿಯಾಗುವ ಅಂಶ.

### ೨. ನೃತ್ಯದ ಕುರಿತಾಗಿ ಸಮಗ್ರ ವಿವರಣೆ ನೀಡುವುದರಿಂದ ವೀಕ್ಷಕರಿಗೆ ಸಮರ್ಥವಾಗಿ ಅರ್ಥ ಮಾಡಿಸಬಹುದೇ?

ವಿವರಣೆ ಬೇಕು. ಆದರೆ ವಿವರಣೆ ಹೇಳಿಕೊಂಡೇ ನೃತ್ಯವನ್ನು ಪ್ರಸ್ತುತಪಡಿಸುವಂತಾದರೆ ಅದು ನರ್ತಕಿಯ ಅಪರಿಪೂರ್ಣ ಕಲಿಕೆಯನ್ನು ಎತ್ತಿ ತೋರಿಸುತ್ತದೆ. ಜನರಿಗೆ ಅರ್ಥ ಮಾಡಿಸುವುದರಲ್ಲೇ ಸಮಯವನ್ನು ಮುಡಿಪಿಡುವುದಾದರೆ ನೃತ್ಯಸ್ವಾದನೆ ವಿಫಲವಾಗುವುದು ಖಂಡಿತ. ಆದರೆ ಈ ವರೆಗೆ ನಿರ್ದಿಷ್ಟ ನೃತ್ಯ ಕಲೆಯ ಪರಿಚಯ ಅಷ್ಟಾಗಿ ಇಲ್ಲದವರಿಗೆ ಅಥವಾ ನೂತನ ಪ್ರಯೋಗಗಳ ಸಂದರ್ಭದಲ್ಲಿ ವಿವರಣೆ ನೀಡುವುದು ಅಗತ್ಯವಾಗುತ್ತದೆ. ಉದಾ; ವಿದೇಶಗಳಲ್ಲಿ, ಪರಊರುಗಳಲ್ಲಿ.

ಏಕೆಂದರೆ ಪ್ರೇಕ್ಷಕರಿಗೆ ಸರಿಯಾಗಿ ಸಂವಹನವಾಗದೇ ಹೋದ ಪಕ್ಷದಲ್ಲಿ ನಮ್ಮ ಪ್ರಯತ್ನ ವ್ಯರ್ಥವಾಗುವ ಸಂದರ್ಭಗಳಿರುತ್ತವೆ. ಯಕ್ಷಗಾನದಲ್ಲಾದರೆ ಪದ್ಯದ ಸಾರವನ್ನು ವಿವರವಾಗಿ ವಿಸ್ತರಿಸಲು ಭಾಷೆ ಮುಖ್ಯ. ಹಾಗಂದ ಮಾತ್ರಕ್ಕೆ ಅಲ್ಲಿ ಅಂತಹ ವಿವರಣೆ ಕಡಿಮೆ ಮೌಲ್ಯದ್ದು ಎಂಬ ಅರ್ಥವಲ್ಲ. ಯಕ್ಷಗಾನದ ಭದ್ರ ಬುನಾದಿ, ಸತ್ವ ಇರುವುದೇ ಅದರ ಮಾತುಗಳಲ್ಲಿ, ವಾಚಿಕಾಭಿನಯದಲ್ಲಿ. ಆದರೆ ನೃತ್ಯದಲ್ಲಿ ಹಾಗಲ್ಲ. ಉದಾಹರಣೆಗೆ, ಸಂಚಾರೀಭಾವ ೧೫ ನಿಮಿಷಕ್ಕಿಂತ ಮುಂದುವರಿದುಕೊಂಡು ಹೋದರೆ ವೀಕ್ಷಕರಲ್ಲಿ ಅದು ಉದಾಸೀನ ಉಂಟು ಮಾಡಬಲ್ಲುದು.



### ೩.ಹಾಗಾದರೆ ಅಭಿನಯವೆಂದರೆ ಹೇಗಿರಬೇಕು ಎಂಬುದು ನಿಮ್ಮ ಅಭಿಪ್ರಾಯ?

ಚೆನ್ನಾಗಿ ಡ್ರೆಸ್, ಮೇಕಪ್ ಮಾಡಿಕೊಂಡಾಕ್ಷಣ ಅಭಿನಯ ಆಗೋದಿಲ್ಲ. ಜೊತೆಗೆ ಬರೀ ಹಸ್ತಗಳನ್ನು ಪ್ರದರ್ಶಿಸಿ ಕುಣಿದರೆ ಮಾತ್ರಕ್ಕೆ ನೃತ್ಯ ಆಗೋದಿಲ್ಲ. ಹಸ್ತ, ಪಾದ ಗತಿಗಳ ಮೂಲಕ ನಾವು ಅಭಿನಯಕ್ಕೆ ಅಂದ ಕೊಡುತ್ತೇವೆ. ನೃತ್ಯ ಕಲಿಯುವವರಿಗೆ ಪ್ರಾರಂಭಕ್ಕೆ ಅದೊಂದು ಸಾಧನ ಮಾತ್ರ. ಅದರ ಮೂಲಕ ಅಭಿನಯದ ಸಾಮರ್ಥ್ಯವನ್ನು ವೃದ್ಧಿಸಿಕೊಳ್ಳಬೇಕು. ವಿಪರ್ಯಾಸವೆಂದರೆ ಕೆಲವರು ಎಲ್ಲವನ್ನೂ ಅಭಿನಯದಲ್ಲೇ ಮಾಡಿ ಮುಗಿಸ್ತಾರೆ.

ನಾವು ಮಾಡುವ ಅಭಿನಯವನ್ನು ಮೊದಲು ನಾವು ಅನುಭವಿಸಬೇಕು. ನಾವೇ ನಮ್ಮ ಭಾವನೆಯನ್ನು ಅರ್ಥ ಮಾಡಿಕೊಳ್ಳದೆ ಹೋದಲ್ಲಿ ಬೇರೆಯವರು ಹೇಗೆ ತಾನೇ ಅರ್ಥ ಮಾಡಿಕೊಂಡರು? ಅಭಿನಯಕ್ಕೆ ಅಂದವನ್ನು ರೂಢಿ ಮಾಡಿಕೊಳ್ಳಬೇಕು. ಅದರಲ್ಲೂ ನಿಂತ ಅಭಿನಯಕ್ಕಿಂತ ಚಲನೆಯಿಂದ ಕೂಡಿದ ಅಭಿನಯ ಹೆಚ್ಚು ಆಕರ್ಷಣೀಯ.

ಆದರೆ ಮಾಡುವ ಅಭಿನಯದಲ್ಲಿ ನಿಖರತೆ, ಶಿಸ್ತು, ಭಾವನೆ, ಅಭಿವ್ಯಕ್ತ ಮಾಡುವ ಕ್ರಮವೂ ಅವಶ್ಯ. ಅಷ್ಟಕ್ಕೂ ಸಾಮಾಜಿಕ-ದೈನಂದಿಕ ಜೀವನ ಮತ್ತು ನಾಟ್ಯ ಇವೆರಡೂ ವಿಭಿನ್ನ. ಸಹಜ ಅಭಿನಯ ನೋಡುಗರನ್ನು ಹೆಚ್ಚಾಗಿ ಸೆಳೆಯುತ್ತವೆ. ಅಭಿನಯದ ಪ್ರಬುದ್ಧತೆ ಕಲಾವಿದೆಯ ಕಲ್ಪನಾ ಶಕ್ತಿಯನ್ನು ಅವಲಂಬಿಸಿರುತ್ತದೆ ಮತ್ತು ವಿಸ್ತಾರವಾಗುತ್ತದೆ.

### ೪.ನೃತ್ಯದಲ್ಲಿ ನವೀನ ಪ್ರಯೋಗಗಳು ಯಾವ ದಿಸೆಯತ್ತ ಇದ್ದರೆ ಒಳಿತು?

ಹೊಸತಿನ ಪ್ರಯೋಗ ಅಭಿನಂದನಾರ್ಹವೇ ಸರಿ. ಆದರೆ ಹೊಸತನ್ನು ಮಾಡಿದಾಗ ಅದು ಪರಂಪರೆ, ಮಾರ್ಗ ಪದ್ಧತಿ ಎಂದೋ, ಮಾರ್ಗ ಪದ್ಧತಿ ಮಾಡಿ ಅದು ಹೊಸತು ಎಂದೋ ಬಿಂಬಿಸಲು ಹೋಗಬಾರದಷ್ಟೇ.ಅಷ್ಟಕ್ಕೂ ಪ್ರಾಚೀನ ವಿದ್ವಾಂಸರು ಥಿಯರಿ ಮೂಲಕವಾಗಿಯೇ ಎಲ್ಲವನ್ನೂ ಬಳಕೆ ಮಾಡಲಿಲ್ಲ. ಆದರೆ ಬರಬರುತ್ತಾ ಗುರುಗಳು ತಮ್ಮದೇ ಆದ ರೀತಿಯಲ್ಲಿ ರೂಢಿ ಮಾಡಿಕೊಂಡು ಪದ್ಧತಿಗಳ ಹುಟ್ಟಿಗೆ ಕಾರಣವಾದರು.

ನೃತ್ಯದಲ್ಲಿ ಗುರು ಮುಖೇನ ಎಂದಿದ್ದರೂ ಎಲ್ಲವನ್ನೂ ಗುರುಗಳ ಮೇಲೆಯೇ ಅವಲಂಬಿಸಬಾರದು. ಕಲಾವಿದೆ ತನ್ನತನವನ್ನೂ ಅರಿತುಕೊಳ್ಳಬೇಕು. ಸೃಜನಶೀಲತೆಯೆಂಬುದು ಅದನ್ನು ಸಾಧಿಸಿಕೊಳ್ಳುವವರ ಸಾಧನೆಯನ್ನು ಅವಲಂಬಿಸಿದೆ.

**೫. ಇಂದಿನ ಪ್ರದರ್ಶನ ಕಲೆಗಳ ಬೆಳವಣಿಗೆಯ ಬಗ್ಗೆ ನಿಮ್ಮ ಅಭಿಪ್ರಾಯ?**

ಈಗ ಪರೀಕ್ಷೆ, ರಂಗಪ್ರವೇಶ ಎಲ್ಲವೂ ವ್ಯಾಪಾರೀಕರಣಕ್ಕೆ ತುತ್ತಾಗಿದೆ. ಅದರಲ್ಲೂ ರಂಗಪ್ರವೇಶ ಖರ್ಚಿಗೆ ದಾರಿ. ಯಾರೂ ಅದರ ಅರ್ಥವನ್ನು ತಿಳಿದು ಮಾಡುತ್ತಿಲ್ಲ. ಡ್ರೆಸ್, ಕಾಸ್ಟ್ಯೂಮ್, ಮೇಕಪ್, ಬ್ರೋಷರ್, ಆಡಂಬರಕ್ಕೇ ಮೀಸಲಾಗುತ್ತಿದೆ. ಯಾರ ಶಿಷ್ಯೆ?, ಎಷ್ಟು ಖರ್ಚು?, ಊಟ ಹಾಕಿಸಿದ್ರಾ?, ಆಹ್ವಾನ ಪತ್ರಿಕೆ ಹೇಗಿತ್ತು ಎಂಬುದರ ಮೇಲೆಯೇ ರಂಗಪ್ರವೇಶದ ಮೌಲ್ಯ ನಿರ್ಧರಿತವಾಗಿದೆಯೇ ವಿನಃ ಕಲಾವಿದೆಯ ಪ್ರತಿಭೆ ಅಲ್ಲ. ಹಾಗೆ ನೋಡಿದರೆ ಸಂಗೀತ ಅಷ್ಟು ಕೆಳ ಮಟ್ಟಕ್ಕಿಳಿದಿಲ್ಲ. ಇಂದಿಗೂ ವೈಯ್ಯಕ್ತಿಕ ಅರ್ಹತೆಯೇ ಕಲಾವಿದೆಯ ಸಾಮರ್ಥ್ಯವನ್ನು ನಿರ್ಧರಿಸುತ್ತದೆ. ಅಷ್ಟರ ಮಟ್ಟಿಗೆ ಸಂಗೀತ ತನ್ನ ಪಾವಿತ್ರ್ಯತೆ ಕಾಪಾಡಿಕೊಂಡಿದೆ.

## ಇನ್ನೇಕೆ ತಡ? ನೀವೂ ಬರೆಯಿರಿ..

**'ಭ್ರಮರಿ'ಯ ಅಂಗಣಕ್ಕಾಗಿ ನಿಮ್ಮ ಕೈ ಬರಹದಿಂದ ಮೂಡಿದ ಯಾವುದೇ ನೃತ್ಯ ಪ್ರಕಾರದ ಬಗೆಗಿನ ಲೇಖನ, ನುಡಿಚಿತ್ರ, ಸಂದರ್ಶನ, ವಿಷಯ ವಿಮರ್ಶೆ, ಚಿಂತನಪ್ರದವಾದ ಬರಹಗಳು ಬೇಕು. ಸಂವಾದ-ಸ್ವಂತಿಕೆಯುಳ್ಳ ವಿಚಾರ ವೈಶಾಲ್ಯತೆಯ ಬರಹಗಳಿದ್ದರೆ ಚೆನ್ನ. ವೈಭವೀಕರಣವಿಲ್ಲದ ವಾಸ್ತವ ಚಿತ್ರಣವಿದ್ದರೆ ಒಳಿತು. ಲೇಖನಗಳ ಸಂಖ್ಯೆ ಮುಖ್ಯವಲ್ಲ. ಆದರೆ ಗುಣಮಟ್ಟದ ಕಾಪಾಡುವಿಕೆಯಲ್ಲಿ ಯಾವುದೇ ರಾಜಿ ಇಲ್ಲ. ಇದು ನಿಮ್ಮ ಪತ್ರಿಕೆ. ನಮ್ಮಷ್ಟೇ ಜವಾಬ್ದಾರಿ ನಿಮಗೂ ಇದೆ. ಪತ್ರಿಕೆ ಓದಿದ ಮೇಲೆ ನಿಮ್ಮ ಅಭಿಪ್ರಾಯಗಳನ್ನು ತಿಳಿಸುತ್ತೀರಲ್ಲಾ? ಮರೆತುಬಿಟ್ಟೀರಿ..! ಪ್ರೀತಿಯಿರಲಿ ಯಾವತ್ತೂ...**



## ಅಂಗಳದ ಮಾತು..ತಿಂಗಳ ಚರ್ಚೆ..

**ನಾಟ್ಯವೆಂದಾಗ ಸಾಮಾನ್ಯ ವೀಕ್ಷಕ ಬಯಸುವುದೇನು? ಶಾಸ್ತ್ರೀಯ ನೃತ್ಯದ ಬಗೆಗಿನ ಅಸಡ್ಡೆಗೆ ಕಾರಣ ಯಾವುದು ಎಂಬುದನ್ನು ವೀಕ್ಷಕರ ನೆಲೆಯಲ್ಲಿ ನಿಂತು ಭ್ರಮರಿಯ ಅಂಗಳದಲ್ಲಿ ಮಾತನಾಡಿದ್ದಾರೆ ಚಿಕ್ಕಮಗಳೂರು ರಾಜಗಿರಿ ಎಸ್ಟೇಟ್‌ನಲ್ಲಿ ಕಾರ್ಯ ನಿರ್ವಹಿಸುತ್ತಿರುವ ಎಬಿಸಿ ಕಾಫಿ ಕಂಪನಿಯ ಉದ್ಯೋಗಿ ಅಕ್ಷಯರಾಮ ಕೆ., ನೃತ್ಯದ ಬಗೆಗಿನ ಎಲ್ಲ ಸಂವಾದಗಳಿಗೂ ಇಲ್ಲಿ ಆದ್ಯತೆಯಿದೆ.**

ನಾಟ್ಯವೆಂದೊಡನೆ ಸಾಮಾನ್ಯನ ಕಣ್ಣ ಮುಂದೆ ಬರುವುದು ಭರತನಾಟ್ಯ. ಮೈ ತುಂಬಾ ವೇಷಭೂಷಣ, ಅಲಂಕಾರ, ಹಿಮ್ಮೇಳ–ಪಕ್ಕವಾದ್ಯ. ಹಾಡಿಗೆ ತಕ್ಕದಾಗಿ ನೃತ್ಯ, ಆಂಗಿಕ ಚಲನೆ. ಓರ್ವ ಸಾಮಾನ್ಯ ವೀಕ್ಷಕನಿಗೆ ಇದಕ್ಕಿಂತ ಆಚೆನದ್ದು ಕಲ್ಪನೆಗೂ ಮೀರಿದ ವಿಷಯಗಳು.

ಭರತನಾಟ್ಯದಲ್ಲಿನ ವಿವಿಧ ಅಂಗಗಳು, ಪಾರಿಭಾಷಿಕ ಶಬ್ದಗಳು, ಭಂಗಿಗಳು ಇವ್ಯಾವುವೂ ಆತನ ತಲೆಯೊಳಗೆ ಹೊಗುವುದು ಕಷ್ಟ. ನೃತ್ಯಪಟುವು ನರ್ತಿಸುತ್ತಿದ್ದರೆ ಆ ಹೆಜ್ಜೆ, ಲಯ, ಕಣ್ಣಿನ ಚಲನೆ, ಮುಖದಲ್ಲಿ ವ್ಯಕ್ತಪಡಿಸುವ ಭಾವಗಳು ಎಲ್ಲವೂ ಆತನ ಗಮನ ಸೆಳೆಯುತ್ತವೆ. ನಾಟ್ಯವೆಂಬುದು ಆತನಿಗೆ ಸಂತೋಷ, ಸಮಾಧಾನ ನೀಡುವ ಸಾಧನ ಮಾತ್ರ. ಕಲಾವಿದರ ಮುಖದ ಭಾಷೆ, ಕಣ್ಣ ಮಾತುಗಳು ಪರಿಣಾಮಕಾರಿಯಾಗಿದ್ದು ಸಾಮಾನ್ಯ ಪ್ರೇಕ್ಷಕರನ್ನು ಬೇರೊಂದು ಅಲೌಕಿಕ ಲೋಕಕ್ಕೆ ಕೊಂಡೊಯ್ಯುವುದೇ ಅಲ್ಲವೇ ನೃತ್ಯದ ಉದ್ದೇಶ?

ಒಮ್ಮೊಮ್ಮೆ ಶಾಸ್ತ್ರೀಯ ನೃತ್ಯಪ್ರಕಾರಗಳೆಲ್ಲವೂ ಹಳೆಯವು, ಆಕರ್ಷಕವಲ್ಲ ಎನ್ನುವ ಭಾವನೆ ಮೂಡುತ್ತದೆ. ಕಾರಣ, ಪಾಶ್ಚಾತ್ಯ ನೃತ್ಯ ಶೈಲಿ, ಸಿನಿಮಾದ ಅಬ್ಬರದ ಸಂಗೀತ, ಆಡಂಬರದ ಪ್ರಪಂಚ ಎಲ್ಲವೂ ನೋಡುಗರ ಮನಸ್ಸು ಕೆಡಿಸುತ್ತಿರುವುದು. ಅದಕ್ಕೆ ಪೂರಕವಾಗಿ ಮಾಧ್ಯಮಗಳು ಕೂಡಾ ಇಂತಹ ಪಾಶ್ಚಾತ್ಯ–ಸಿನಿ ಸಂಸ್ಕೃತಿಗೇ ಆದ್ಯತೆ ನೀಡಿ ಉರಿಯುವ ಬೆಂಕಿಗೆ ತುಪ್ಪ ಸುರಿಯುತ್ತಿದೆ. ಮಾತ್ರವಲ್ಲ, ಶಾಸ್ತ್ರೀಯ ಪದ್ಧತಿಗಳು ಮನಸ್ಸಿನಾಳಕ್ಕಿಳಿದು ಅಲೌಕಿಕ ಭಾವನೆಯನ್ನು ಉಂಟುಮಾಡುವುದರ ಬಗ್ಗೆ ಅಪರೂಪಕ್ಕೊಮ್ಮೆಯಾದರೂ ಯಾವುದೇ ಕಾರ್ಯಕ್ರಮ,ವಿಮರ್ಶೆಗಳು ಪ್ರಸಾರ ಆಗುವುದಿಲ್ಲ. ಈ ಕುರಿತಾಗಿ ಇನ್ನಾದರೂ ಖಾಸಗಿ ವಾಹಿನಿಗಳು ಒಮ್ಮೆ ಪ್ರಯತ್ನಿಸಬಾರದೇಕೆ?




# ಲಾವಣಿ-ಮರುಕಳಿಸೀತೇ ವೈಭವ ?

✍ ಶ್ರೀಲಕ್ಷ್ಮೀ ಎಂ. ಭಟ್

**ಕಳೆದ ಸಂಚಿಕೆಯ ಲೋಕ ಭ್ರಮರಿಯಲ್ಲಿ ನಾವು ನೋಡಿದ್ದು ಲಾವಣಿ ಲೋಕದ ಬಾಹ್ಯ ಮುಖವನ್ನಷ್ಟೇ..ಲಾಸ್ಯ, ನೃತ್ತ, ವೈಭವ, ಬಿಸುಪುಗಳಲ್ಲಿ ಯಾವ ಶಾಸ್ತ್ರೀಯ ನೃತ್ಯ ಪ್ರಕಾರಕ್ಕೂ ಕಡಿಮೆ ಇಲ್ಲದ ಈ ನೃತ್ಯ ತನ್ನ ಪ್ರಣಯಾತ್ಮಕ ಶೈಲಿಯಿಂದಾಗಿ ಅನೇಕ ವಿಮರ್ಶಕರ ಕಟುಟೀಕೆಗೂ ಗುರಿಯಾಗಿದೆ. ಅದರತ್ತ ಇದೀಗ ಒಂದು ನೋಟ...**

... ಉಳಿದದ್ದೇನೇ ಇರಲಿ, ಲಾವಣಿ ಕಲಾವಿದರ ಖಾಸಗಿ ಬದುಕಿನ ಜಗತ್ತನ್ನೊಮ್ಮೆ ಪ್ರವೇಶಿಸಿದರೆ ಲಾವಣಿ ನರ್ತಕರ ನಗು ಉಲ್ಲಾಸಗಳು ಕೇವಲ ಅವರು ನೃತ್ಯಕ್ಕೆ ಹಾಗೂ ರಂಗಮಂಚಕ್ಕೆ ಕೊಡುವ ಗೌರವವಷ್ಟೇ ಎಂಬ ಸತ್ಯ ಅರಿವಾಗುತ್ತದೆ. ಇಂದು ಮಹಾರಾಷ್ಟ್ರದಲ್ಲಿ ಲಾವಣಿಯನ್ನೇ ಜೀವನಾಧಾರವಾಗಿಸಿಕೊಂಡಿರುವ ಕಲಾವಿದರ ಸಂಖ್ಯೆ ಸುಮಾರು ಎರಡು ಸಾವಿರ.

ಕಡವತ್, ಡೋರೀ, ಕೈಕಡೀ, ಗೋಂದೋಳೀ, ಡೋಂಬ್ರೀ, ಕೊಲಾಟಿ ಮೊದಲಾದ ಪರಿಶಿಷ್ಟ ಜನಾಂಗಗಳಿಗೆ ಸೇರಿರುವ ಇವರಲ್ಲಿ ಶಾಲೆ-ಕಾಲೇಜು ಶಿಕ್ಷಣ ಪಡೆಯುವವರು ತೀರಾ ವಿರಳ. ಒಮ್ಮೆ ಒಂದು ತಂಡವನ್ನಿವರು ಸೇರಿದರೆಂದರೆ ಕೊನೆಯವರೆಗೂ ಅಲ್ಲೇ ಉಳಿಯುತ್ತಾರೆ. ನವಾರಿ ಸೀರೆಯನ್ನುಟ್ಟು, ಭರ್ಜರಿ ಮೇಕಪ್ ತೊಟ್ಟು ನರ್ತಿಸುವ ಈ ಕಲಾವಿದೆಯರಲ್ಲಿ ಹೆಚ್ಚಿನವರು ಮದುವೆಯಾಗದೇ ನೃತ್ಯದಲ್ಲಿಯೇ ತಮ್ಮನ್ನು ಸಂಪೂರ್ಣವಾಗಿ ತೊಡಗಿಸಿಕೊಳ್ಳುತ್ತಾರೆ.

ಲಾವಣಿ ತಂಡಗಳಿಗೆ ಆ ತಂಡದ ಅತ್ಯುನ್ನತ ನೃತ್ಯಗಾತಿಯ ಹೆಸರನ್ನು ಇಟ್ಟುಕೊಳ್ಳಲಾಗುತ್ತದೆ. ಪ್ರದರ್ಶನಗಳನ್ನು ಏರ್ಪಡಿಸಿದಾಗ ಆ ತಂಡಗಳ ಮುಖ್ಯಸ್ಥರು ಅರ್ಧಕ್ಕಿಂತಲೂ ಹೆಚ್ಚಿನ ಪಾಲು ಲಾಭದ ಹಣವನ್ನು ತಾವೇ



ಇಟ್ಟುಕೊಳ್ಳುವುದರಿಂದ ಕಲಾವಿದರಿಗೆ ದಕ್ಕುವ ಹಣ ಅತ್ಯಲ್ಪ. ಅಪರೂಪಕ್ಕೆ ಶ್ರೀಮಂತರು ಏರ್ಪಡಿಸುವ ಖಾಸಗಿ ಪ್ರದರ್ಶನಗಳಿಂದಾಗಿ ಬರುವ ಹಣದಿಂದ ಇವರ ಬದುಕು ತುಸು ಸುಗಮವಾಗಿ ಸಾಗಿದರೂ ಅದನ್ನು ನಂಬಿ ಕೂರುವಂತಿಲ್ಲ. ವೃದ್ಧಾಪ್ಯ ಕಾಲಿಟ್ಟ ನಂತರ ಇವರ ಬದುಕು ನಿಜಕ್ಕೂ ದಯನೀಯ ಸರಕಾರ ಕೊಡುವ ವೇತನವೂ ಅತ್ಯಲ್ಪ.

ಹಿಂದೆಲ್ಲಾ ಇಲ್ಲಿನ ಆಳುವ ವರ್ಗ ಲಾವಣಿ ನರ್ತಕಿಯರನ್ನು ದೈಹಿಕ ಸಂಬಂಧಕಾಗಿ ಬಳಸಿಕೊಳ್ಳುವುದೂ ಇತ್ತು. ಅದರಲ್ಲಿಯೂ, ನರ್ತಕಿಯರನ್ನು ಮದುವೆಯಾಗುವುದಾಗಿ ನಂಬಿಸಿ ಗರ್ಭಿಣಿಯರಾದಾಗ ಕೈಕೊಟ್ಟು ಹೋಗುತ್ತಿದ್ದವರೇ ಹೆಚ್ಚು. ಆಗೆಲ್ಲಾ ಈ ನರ್ತಕಿಯರು ಮಗುವನ್ನು ತಮ್ಮ ತಂದೆತಾಯಿಗಳಲ್ಲಿಗೋ, ದೂರದ ಸಂಬಂಧಿಗಳಲ್ಲಿಗೋ ಕಳಿಸಿಬಿಡುತ್ತಿದ್ದರು. ಹೆಣ್ಣು ಮಗುವಾದಲ್ಲಿ ತಮ್ಮದೇ ಕಲೆಯಲ್ಲಿ ತೊಡಗಿಸಿಕೊಳ್ಳುತ್ತಿದ್ದರು. ಆ ಕಾಲಕ್ಕೆ ಮಡಿವಂತ ಮಹಿಳೆಯರು ಲಾವಣಿ ಪ್ರದರ್ಶನಗಳನ್ನು ವೀಕ್ಷಿಸುವುದೂ ನಾಚಿಕೆಗೇಡಿನ ವಿಷಯ!

ಮರಾಠಿ ದಲಿತ ಸಾಹಿತ್ಯದಲ್ಲಿ ಈ ಕುರಿತಾದ ಹಲವು ಪ್ರಸ್ತಾಪಗಳನ್ನು ಕಾಣಬಹುದು. ಕಿಶೋರ್ ಶಾಂತಾಬಾಯಿ ಕಾಳೆ ಬರೆದ 'ಕೊಲ್ಯಾಟಾಚೀ ಪೋರ್' ಪುಸ್ತಕದಲ್ಲಿ ಅವರ ತಾಯಿ, ಲಾವಣಿ ಕಲಾವಿದೆ ಶಾಂತಾಬಾಯಿ ಕಾಳೆ ಅವರ ಬದುಕಿನ ಸವಿಸ್ತಾರ ಚಿತ್ರಣವಿದೆ.

ಪ್ರದರ್ಶನಗಳಿಗೆ ಸಂಬಂಧಿಸಿದಂತೆ ಪ್ರಸಕ್ತ ಸನ್ನಿವೇಶದಲ್ಲಿ ಹಿಂದಿನ ಶ್ರೇಷ್ಠ ಲಾವಣಿಗಳನ್ನು ಸಿನೆಮಾ ಶೈಲಿಯಲ್ಲಿ ರೀಮಿಕ್ಸ್ ಮಾಡಿ ನೋಡುಗರ ಅಭಿರುಚಿನ್ಯೆಚ್ಯಗೊಳಿಸಲಾಗುತ್ತದೆ ಎನ್ನುವುದು ಹಿರಿಯ ಕಲಾವಿದರ ಆಕ್ರೋಶ. ಇತ್ತೀಚೆಗೆ ಲಾವಣಿ ಹೆಚ್ಚು ವ್ಯಾಪಾರೀಕರಣಗೊಂಡಿರುವುದಂತೂ ನಿಜ. ಆದರೆ ಈ ಬಗೆಯ ವ್ಯವಸಾಯೀಕರಣದಿಂದಾಗಿ ತಮ್ಮ ಬದುಕು ಬಹಳಷ್ಟು ಸುಧಾರಿಸಿದೆ ಎಂಬುದು ಹಲವು ನರ್ತಕಿಯರ ಅಭಿಮತ.

ಈ ಅಪರೂಪದ ನೃತ್ಯ ಶೈಲಿಯ ಉಳಿವಿಗಾಗಿ ಇಲ್ಲಿನ ವಿಶ್ವವಿದ್ಯಾನಿಲಯ ಹಾಗೂ ಶಿಕ್ಷಣ ಸಂಸ್ಥೆಗಳಲ್ಲೂ ಲಾವಣಿ ಶಿಕ್ಷಣ ನೀಡಲಾಗುತ್ತದೆ. ಈ ಕುರಿತಾದ ಹೆಚ್ಚಿನ ಸಂಶೋಧನೆಗೂ ಪ್ರಾತಿನಿಧ್ಯ ನೀಡಲಾಗಿದೆ. ಲಾವಣಿಯ ಉಚ್ಛ್ರಾಯದ ದಿನಗಳು ಮರುಕಳಿಸಲಿವೆ ಎಂಬುದು ಕಲಾವಿದರ ಆಶಯ.

■■■■■■■■■■■■■■■■

**ಸಾಂ**ಪ್ರದಾಯಿಕ ಕಲೆಗೆ ಹೊಸ ಸ್ಪರ್ಶ, ಸಾಂಸ್ಕೃತಿಕ ಕ್ಷೇತ್ರಕ್ಕೆ ನವೀನ ಆಯಾಮ ಕೊಡುವಲ್ಲಿ ಉತ್ತಮ ಪ್ರಯತ್ನ **ನೂಪುರ ಭ್ರಮರಿ**. ಮುಂದಿನ ಸಂಚಿಕೆಗೆ ಉತ್ಸುಕತೆಯಿಂದ ಕಾಯುತ್ತಿದ್ದೇವೆ. ನಮ್ಮ ಸಹಕಾರ ಪತ್ರಿಕೆಗೆ ಸದಾ ಇರುತ್ತದೆ.

**- ದೀಪಕ್‌ರಾಜ್**
**ಟೆಕ್ನಿಕಲ್ ಸಪೋರ್ಟ್ ರೆಪ್ರೆಸೆಂಟೇಟಿವ್**
**ದಿವ್ಯಾ ಸಿಸ್ಟಂ, ಮಂಗಳೂರು**




**ಶು**ಭಾಶಯಗಳು. ಪತ್ರಿಕೋದ್ಯಮ ಅಧ್ಯಾಪನಾ ಬಳಗದ ಹೊಸ ಸದಸ್ಯೆಯ ಈ ಪ್ರಯತ್ನ ನಿಜಕ್ಕೂ ಸಂತಸ ; ಜೊತೆಗೆ ಅಚ್ಚರಿ. ಮತ್ತಷ್ಟು ಅಚ್ಚರಿಯ ಪ್ರಯತ್ನಗಳ ನಿರೀಕ್ಷೆಯಿದೆ.

**- ನಿರಂಜನ ವಾನಳ್ಳಿ, ಮುಖ್ಯಸ್ಥರು,**
**ಪತ್ರಿಕೋದ್ಯಮ ಸ್ನಾತಕೋತ್ತರ ವಿಭಾಗ**
**ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.**

**ನೃ**ತ್ಯಾಭ್ಯಾಸಿಗಳಿಗೆ ಈ ಪತ್ರಿಕೆ ನಿಜಕ್ಕೂ ಉಪಯುಕ್ತ. ಕಲೆಯ ಸೇವೆಗೆ ಪ್ರಯತ್ನ ಸದಾ ಮುಂದುವರಿಯಲಿ.

**- ಕುಬಣೂರು ಶ್ರೀಧರ್ ರಾವ್, ಸಂಪಾದಕರು**
**'ಯಕ್ಷಪ್ರಭಾ' - ಯಕ್ಷಗಾನ ಮಾಸಪತ್ರಿಕೆ**
**ಉಜಿರೆ, ಬೆಳ್ತಂಗಡಿ, ದ.ಕ**

**ನೂಪುರ ಭ್ರಮರಿ-** ಹೆಸರು ತುಂಬಾ ಹಿಡಿಸಿತು. ವಿನೂತನವಾಗಿದೆ. ಅರ್ಥಪೂರ್ಣವಾಗಿದೆ..ಉತ್ತಮ ಪ್ರಯತ್ನ. ಜೊತೆಗೆ ನೃತ್ಯ ಕಲೆಯ ಬಗ್ಗೆ ಆಸಕ್ತರಿಗೆ ವಿವರ ತಿಳಿಸಿಕೊಡುವುದಲ್ಲದೆ, ಅಭಿರುಚಿ ಮೂಡಿಸುತ್ತದೆ. ಶುಭವಾಗಲಿ. ಪ್ರೋತ್ಸಾಹ ಸದಾ ಇರುತ್ತದೆ.

**- ರವಿಕಿರಣ್**
**ಸೇಲ್ಸ್ ಮ್ಯಾನೇಜರ್**
**ಇಂಡೋಏಷ್ಯಾ ಹೋಲಿಡೇ ಕಂಪೆನಿ, ಬೆಂಗಳೂರು.**



**...ನೂಪುರ ಭ್ರಮರಿ**ಗೆ ಅಭಿನಂದನೆಗಳು. ಮಂಜುನಾಥ ಸ್ವಾಮಿಯ ಅನುಗ್ರಹವಿರಲಿ.

**-ಡಾ//ಡಿ. ವೀರೇಂದ್ರ ಹೆಗ್ಗಡೆ**
**ಧರ್ಮಾಧಿಕಾರಿಗಳು**
**ಧರ್ಮಸ್ಥಳ**




**...ಪ್ರ**ಯತ್ನ, ಪರಿಣತಿ, ವಿಷಯ ಜ್ಞಾನ, ಸಾಧನೆಯ ಛಲ ಇವುಗಳನ್ನೆಲ್ಲಾ ಪ್ರತಿಫಲಿಸುತ್ತಿರುವ **ನೂಪುರ ಭ್ರಮರಿ**, ಅಮೂಲ್ಯ ಪತ್ರಿಕೆಯಾಗುವ ಎಲ್ಲಾ ಲಕ್ಷಣಗಳನ್ನು ತನ್ನೊಡಲಲ್ಲಿ ಕಾಪಿಟ್ಟು ಕಾವು ಕೊಡುವ ಪ್ರಯತ್ನದಲ್ಲಿದೆ. ನೃತ್ಯದಲ್ಲಿ ಯಾವುದೇ ಅಂಶದಲ್ಲಿ ಪರಿಣತಿ ಹೊಂದಿಲ್ಲದವರಿಗೂ ಭ್ರಮರಿ ಅವರ ಅರಿವಿನ ಕ್ಷಿತಿಜವನ್ನು ವಿಸ್ತರಿಸುತ್ತದೆ ಎಂಬುದೇ ಸಂತೋಷ.

ಸರಳ ವಿಷಯಗಳಾದ ರಂಗಪ್ರವೇಶ, ಭರತನಾಟ್ಯದ ಪ್ರಾಚೀನತೆ, ಹುಟ್ಟು ಗಳಂತಹ ಸಂಗತಿಗಳ ಬಗೆಗಿನ ಪ್ರಾಜ್ಞರ ಮಾತುಗಳು ಆ ಕ್ಷೇತ್ರದ ಬಗೆಗೆ ಕುತೂಹಲ ಮೂಡಿಸುತ್ತಿವೆ. ಅದಕ್ಕಾಗಿ ನೂಪುರ ಭ್ರಮರಿಯನ್ನು ಸಂಪೂರ್ಣ ಪ್ರೀತಿಯಿಂದ ಓದುತ್ತಿದ್ದೇನೆ.

ಜನಸಾಮಾನ್ಯರಿಗೂ ನೃತ್ಯವನ್ನು ಒಯ್ದು ತಲುಪಿಸಬೇಕೆಂಬ ಹಂಬಲದ ಈ ಪ್ರಯತ್ನಕ್ಕೆ ಶುಭ ಕೋರುತ್ತಾ, ಪತ್ರಿಕೆಯನ್ನು ಪರಿಚಯಿಸಿದ ಸನ್ಮಿತ್ರರಿಗೂ ಕೃತಜ್ಞತೆಯನ್ನು ತಿಳಿಸುತ್ತಾ; ರಥ ಎಳೆದಾಗ ಕೈ ಜೋಡಿಸಿದಾತ ರಥವನ್ನು ಎಳೆಯಲು ಸಾಧ್ಯವಾಗದಿದ್ದರೂ ಎಳೆದಿದ್ದೇನೆ ಎಂಬ ಧನ್ಯತೆಯನ್ನು ಹೊಂದಬಹುದಾದಂತೆ, ಆಗಾಗ ಬಂದು ಕೈಜೋಡಿಸುತ್ತೇನೆ.

**- ಹರೀಶ್ ಟಿ. ಜಿ**
**ಕನ್ನಡ ಉಪನ್ಯಾಸಕರು**
**ಆಳ್ವಾಸ್ ಕಾಲೇಜ್, ಮೂಡಬಿದಿರೆ.**

